**ಪಿ.ಡಬ್ಲ್ಯು-01 –ಸಂತೋಷ್ ಕುಮಾರ್ ಆರ್.**

**ಸಾಕ್ಷಿಯನ್ನು ದಿನಾಂಕಃ 23.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ. ಎಂ.ಬಿ.ಎಸ್. ವಕೀಲರಿಂದಃ**

ನನ್ನ ತಂದೆ ತೀರಿಕೊಂಡು ಸುಮಾರು 20 ವರ್ಷ ಆಗಿರುತ್ತದೆ. ಅವರು ಹುಣಸೂರಿನಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ಹುಣಸೂರಿನಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನಾನು ಹುಟ್ಟಿದಾಗಿನಿಂದ ಹುಣಸೂರಿನಲ್ಲಿಯೇ ವಾಸವಿರುತ್ತೇನೆ. ನಾನು ಹುಣಸೂರಿನಲ್ಲಿ ವಾಸವಿರುವ ಮನೆ ಶೀಟ್ ನ ಮನೆಯಾಗಿರುತ್ತದೆ. ಅದರ ವಿಸ್ತೀರ್ಣ ಪೂರ್ವ-ಪಶ್ಚಿಮಃ 18 ಅಡಿ ಹಾಗು ಉತ್ತರ-ದಕ್ಷಿಣಃ 20 ಅಡಿ ಆಗಿರುತ್ತದೆ. ನಾವು ಮೊದಲು ಹಂಚಿನ ಮನೆಯಲ್ಲಿದ್ದು ಈಗ ಅದಕ್ಕೆ ಕಲ್ಲಾರ್ ಶೀಟ್ ಹಾಕಿಸಿಕೊಂಡು ವಾಸವಿರುತ್ತೇವೆ. ನಾನು, ನನ್ನ ಅಣ್ಣ ಹಾಗು ನನ್ನ ತಂಗಿ ಎಲ್ಲರೂ ಅದೇ ಮನೆಯಲ್ಲಿ ಹುಟ್ಟಿ ಬೆಳೆದಿರುತ್ತೇವೆ. ಸದರಿ ಮನೆ ನಮ್ಮ ತಾತ ಅಂದರೆ ತಾಯಿಯ ತಂದೆಯ ಕಾಲದಿಂದಲೂ ಇದ್ದಿದ್ದು ಈಗ ನನ್ನ ತಾಯಿಯ ಹೆಸರಿನಲ್ಲಿರುತ್ತದೆ. ಆ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಮನೆಯು ಈ ಹಿಂದೆ ನನ್ನ ತಂದೆಯಾದ ರಾಮನಾಯಕರವರ ಹೆಸರಿನಲ್ಲಿದ್ದು ನಂತರ ನನ್ನ ತಾಯಿಯ ಹೆಸರಿಗೆ ಬದಲಾಗಿದ್ದು ಸದರಿ ಸ್ವತ್ತಿನಲ್ಲಿ ಭಾಗ ಕೊಡಬೇಕಾಗುತ್ತದೆ ಎನ್ನುವ ಕಾರಣಕ್ಕಾಗಿ ಸದರಿ ಆಸ್ತಿ ಹಿಂದೆ ನನ್ನ ತಾಯಿಯ ತಂದೆಯ ಕಡೆಯಿಂದ ತಾಯಿ ಹೆಸರಿಗೆ ಬದಲಾಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ಭಾಗ ಕೊಡಬೇಕಾಗುತ್ತದೆ ಎನ್ನುವ ಕಾರಣಕ್ಕಾಗಿ ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಹಿಂದೆ ಕೂಲಿ ಕೆಲಸ ಮಾಡಿಕೊಂಡಿದ್ದರು. ನನ್ನ ತಂದೆ ಹುಣಸೂರಿನಲ್ಲಿ ಯಾವುದೇ ಆಸ್ತಿ ಹೊಂದಿರುವುದಿಲ್ಲ. ಪ್ರತಿವಾದಿಗಳ ಹೆಸರಿನಲ್ಲಿ

ಇರುವ ಆಸ್ತಿಗಳನ್ನು ಸೇರಿಸಿ ಈ ದಾವೆ ಸಲ್ಲಿಸಿರುತ್ತೇವೆಂದರೆ ಸರಿ. ಸಾಕ್ಷಿ ಮುಂದುವರೆದು ಅವು ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಐಟಂ ನಂ. 2 ರ ಆಸ್ತಿಯನ್ನು 1 ನೇ ಪ್ರತಿವಾದಿಯ ಗಂಡ ಹಾಗು ಮಕ್ಕಳು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿರುತ್ತದೆ. ಸದರಿ ಆಸ್ತಿಯನ್ನು ಅವರು 1977 ನೇ ಇಸವಿಯಲ್ಲಿ ಆ ರೀತಿ ಮಾರಾಟ ಮಾಡಿರುತ್ತಾರೆ. ಆಗ ನಾನು ಹುಟ್ಟಿರಲಿಲ್ಲ ಎಂದರೆ ಸರಿ. ಆಗ ನನ್ನ ತಂದೆ ಬದುಕಿದ್ದರು ಎಂದರೆ ಸರಿ. ಸದರಿ ಕ್ರಯ ಪತ್ರಕ್ಕೆ ನನ್ನ ತಂದೆ ಸಹಿ ಮಾಡಿರುವುದಿಲ್ಲ. ಸದರಿ ವಿಚಾರವನ್ನು ನನಗೆ 5 ನೇ ಪ್ರತಿವಾದಿ ತಿಳಿಸಿರುತ್ತಾರೆ. ಆ ವಿಚಾರವನ್ನು ಅವರು ತುಂಬಾ ಹಿಂದೆಯೇ ಅಂದರೆ ಸುಮಾರು 20-22 ವರ್ಷಗಳ ಹಿಂದೆಯೇ ತಿಳಿಸಿದ್ದು ಆಗ ನಾವು ಚಿಕ್ಕವರಿದ್ದು ನಮ್ಮ ತಂದೆ ಬದುಕಿದ್ದ ಕಾರಣ ಆ ಬಗ್ಗೆ ನಾವು ಅಷ್ಟು ಯೋಚಿಸಿರುವುದಿಲ್ಲವೆಂದು ನುಡಿಯುತ್ತಾರೆ. ಆ ಬಗ್ಗೆ ನನ್ನ ತಂದೆ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರೋ ಅಥವಾ ಕಂದಾಯ ಇಲಾಖೆಯಲ್ಲಿ ಅರ್ಜಿ ಸಲ್ಲಿಸಿದ್ದಾರೋ ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈ ಬಗ್ಗೆ ನನ್ನ ತಾಯಿ ದಾಖಲೆಯನ್ನು ಕಳೆದ 07-08 ವರ್ಷಗಳ ಹಿಂದೆ ತೆಗೆದು ಪರಿಶೀಲಿಸಿರುತ್ತಾರೆ. ದಾವಾ ಆಸ್ತಿಯು ಯಾರಿಗೆ ಯಾವ ರೀತಿ ಬಂದಿರುತ್ತದೆ ಎಂದರೆ ಸಾಕ್ಷಿಯು ಅದು ನಮ್ಮ ತಾತ ಅಂದರೆ ನಮ್ಮ ತಂದೆಯ ತಂದೆಗೆ ಅವರ ಕಾಲದಿಂದಲೂ ಬಂದಿದ್ದು ಅವರಿಗೆ ವಯಸ್ಸಾದ ಕಾರಣ ನಮ್ಮ ದೊಡ್ಡಪ್ಪನ ಹೆಸರಿಗೆ ಖಾತೆ ಬದಲಿಸಿರುತ್ತಾರೆಂದು ನುಡಿಯುತ್ತಾರೆ. ನನ್ನ ತಾತ ಚಿಕ್ಕಲಿಂಗನಾಯಕ 1978 ನೇ ಇಸವಿಯಲ್ಲಿ ಮೃತರಾಗಿರುತ್ತಾರೆ. ಆ ಬಗ್ಗೆ ಅವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 1 ನೇ ಪ್ರತಿವಾದಿಯ ಗಂಡ 6 ನೇ ಪ್ರತಿವಾದಿಗೆ 1977 ರಂದು ಮಾರಾಟ ಮಾಡಿದ್ದರು ಎಂದು

ಹೇಳಲಾದ ಕ್ರಯ ಪತ್ರಕ್ಕೆ ನನ್ನ ತಾತ ಸಹಿ ಮಾಡಿರುತ್ತಾರೆ. ನನ್ನ ತಾತ ಸದರಿ ಯಾವುದೇ ಕ್ರಯ ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಹಾಗು ಸದರಿ ಕ್ರಯದ ಸುಮಾರು 08–10 ವರ್ಷಗಳ ಹಿಂದೆಯೇ ಅವರು ಮೃತರಾಗಿರುತ್ತಾರೆಂದರೆ ಸರಿಯಲ್ಲ.

ನಾನು ಪ್ರಥಮ ಪಿ.ಯು.ಸಿ.ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಐಟಂ ನಂ. 1 ಹಾಗು 2ರ ಆಸ್ತಿಗಳು 1ನೇ ಪ್ರತಿವಾದಿಯ ಗಂಡನಾದ ಲಿಂಗನಾಯಕರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಗಳಿಗೆ ಸಂಬಂಧಿಸಿದಂತೆ 1ನೇ ಪ್ರತಿವಾದಿಯ ಗಂಡನಾದ ಲಿಂಗನಾಯಕರವರು ಎಲ್.ಎನ್.ಡಿ.ಜಿ. ನಂ. 149/1968–1969 ರಂತೆ ಮಂಜೂರಾತಿಗಾಗಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದು ದಿನಾಂಕಃ 04.06.1970 ರಂದು 1ನೇ ಪ್ರತಿವಾದಿಗೆ ಸದರಿ ಆಸ್ತಿಗಳಿಗೆ ಸಾಗುವಳಿ ಪತ್ರ ನೀಡುವುದರ ಮೂಲಕ ಮಂಜೂರಾಗಿರುತ್ತದೆಂದರೆ ಸರಿಯಲ್ಲ. ಆ ರೀತಿ 1ನೇ ಪ್ರತಿವಾದಿಯ ಗಂಡನಿಗೆ ಮಂಜೂರಾದ ನಂತರ ಸದರಿ ಆಸ್ತಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಗಳು 1ನೇ ಪ್ರತಿವಾದಿಯ ಗಂಡನ ಹೆಸರಿಗೆ ಬದಲಾಗಿರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಾತನಿಗೆ ವಯಸ್ಸಾದ ಕಾರಣ ಹಾಗು ಲಿಂಗನಾಯಕರವರು ಹಿರಿಯ ಮಗನಾದ ಕಾರಣ ಅವರ ಹೆಸರಿಗೆ ಕಂದಾಯ ದಾಖಲೆಗಳು ಬದಲಾಗಿರುತ್ತವೆಂದು ನುಡಿಯುತ್ತಾರೆ. ಆ ರೀತಿ 1ನೇ ಪ್ರತಿವಾದಿಯ ಗಂಡನಾದ ಲಿಂಗನಾಯಕರವರು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸುವ ಮೊದಲೇ ನನ್ನ ತಂದೆ ಪ್ರತ್ಯೇಕವಾಗಿ ಹುಣಸೂರಿನಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೌಲ್ಯ ಈಗ ಅಧಿಕವಾಗಿದ್ದರಿಂದ ಅದು ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ಸುಳ್ಳು ಹೇಳಿ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಆ ರೀತಿ ದಾವಾ

ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿ ಆಗಿದ್ದಲ್ಲಿ ನನ್ನ ತಂದೆಯ ಕಾಲದಲ್ಲಿಯೇ ಅವರು ದಾವೆ ಹೂಡುತ್ತಿದ್ದರು ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಐಟಂ ನಂ. 3 ರ ಸ್ವತ್ತು ನನ್ನ ಅಜ್ಜಿ ಎಂದರೆ ನನ್ನ ತಂದೆಯ ತಾಯಿ ಮಹದೇವಮ್ಮರವರ ಹೆಸರಿನಲ್ಲಿ ಇರುತ್ತದೆ. ನನ್ನ ಅಜ್ಜಿಗೆ ಅದು ಸರ್ಕಾರದಿಂದ ಮಂಜೂರಾದ ಆಸ್ತಿಯಾಗಿರುತ್ತದೆ. ಆ ರೀತಿ ನನ್ನ ಅಜ್ಜಿಗೆ ಮಂಜೂರಾದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ಅಜ್ಜಿ 1981 ನೇ ಇಸವಿಯಲ್ಲಿ ಮೃತರಾಗಿರುತ್ತಾರೆ. ಅವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಐಟಂ ನಂ. 3 ಆಸ್ತಿಯೂ ಸಹ 1 ನೇ ಪ್ರತಿವಾದಿಯ ಗಂಡನಾದ ಲಿಂಗನಾಯಕರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಐಟಂ ನಂ. 3 ಸ್ವತ್ತಿನ ಕಂದಾಯ ದಾಖಲೆ ಈಗಲೂ 1 ನೇ ಪ್ರತಿವಾದಿಯ ಗಂಡ ಲಿಂಗನಾಯಕರವರ ಹೆಸರಿನಲ್ಲಿರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ಹಾಗು ಅವರ ಮಗನಾದ 2 ನೇ ಪ್ರತಿವಾದಿ ಸದರಿ ಮನೆಯಲ್ಲಿ ವಾಸವಿರುತ್ತಾರೆಂದರೆ ಸಾಕ್ಷಿಯು ಅಲ್ಲಿ 02 ಮನೆಗಳಿದ್ದು ಅಲ್ಲಿ 1 ನೇ ಪ್ರತಿವಾದಿ ಹಾಗು ಅವರ ಇಬ್ಬರು ಮಕ್ಕಳು ವಾಸವಿರುತ್ತಾರೆಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನಾನು ಪರಿಶೀಲಿಸಿರುತ್ತೇನೆ. ಆಗ ದಾವಾ ಆಸ್ತಿಗಳು ನನ್ನ ದೊಡ್ಡಪ್ಪ ಅಂದರೆ 1 ನೇ ಪ್ರತಿವಾದಿಯ ಗಂಡನಾದ ಲಿಂಗನಾಯಕರವರ ಹೆಸರಿನಲ್ಲಿ ಇದ್ದಿರುತ್ತದೆ. ದಾವಾ ಐಟಂ ನಂ. 3 ರ ಆಸ್ತಿ ನನ್ನ ಅಜ್ಜಿಯಾದ ಮಹದೇವಮ್ಮರವರಿಗೆ ಮಂಜೂರಾದ ಸಂಬಂಧ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಅಗತ್ಯವಿದ್ದಲ್ಲಿ ಹಾಜರುಪಡಿಸಬಹುದು. ಆ ರೀತಿ ನನ್ನ ಅಜ್ಜಿಯ ಹೆಸರಿನಲ್ಲಿ ಯಾವುದೇ

ದಾಖಲೆಗಳು ಇರುವುದಿಲ್ಲ, ಬದಲಾಗಿ ಅದು 1 ನೇ ಪ್ರತಿವಾದಿಯ ಗಂಡನಾದ ಲಿಂಗನಾಯಕ ಸ್ವಯಾರ್ಜಿತ ಆಸ್ತಿಯಾಗಿದ್ದು ಆ ಕಾರಣಕ್ಕಾಗಿ ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನನ್ನಲ್ಲಿ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಹುಣಸೂರಿನಲ್ಲಿ ವಾಸ ಮಾಡುತ್ತಿರುವ ಮನೆಯನ್ನು ಈ ದಾವೆಯಲ್ಲಿ ಸೇರಿಸದೇ ಇದ್ದು ಆ ಕಾರಣಕ್ಕಾಗಿಯೂ ಸಹ ದಾವೆಯಲ್ಲಿ ಕೇಳಿದ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಗೆ ಮಾರಾಟ ಮಾಡಿದ ಕ್ರಯ ಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದಾಗ್ಯೂ ಸಹ 1 ಮತ್ತು 2 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇವೆಂದರೆ ಸರಿಯಲ್ಲ.

**3, 5 ಮತ್ತು 6 ನೇ ಪ್ರತಿವಾದಿಗಳು ಮತ್ತು ಅವರ ವಕೀಲರು ಗೈರು ಹಾಜರಾಗಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.**

**<u>ಮರು ವಿಚಾರಣೆಃ ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**